ಅಧ್ಯಕ್ಷರು.— ಈ ಪ್ರಶ್ನೆಯನ್ನು ಪರಿಶೀಲನೆಗಾಗಿ, ತನಿಖೆಗಾಗಿ ಅಥವಾ ಪರದಿಗಾಗಿ ಹಕ್ಕಿ ಭಾದ್ಯತೆ ಸಮಿತಿಗಾಗಿ ಕಳುಹಿಸಿಕೊಡುತ್ತಿದ್ದೇನೆ.

ಗಮನ ಸೆಳೆವ ಸೂಚನೆ

ಹೊಳೆ ಹೊನ್ನೂರು ಮಂಕಲ ಪಂಚಾಯಿತಿ ವ್ಯಾಪ್ತಿಯಲ್ಲಿ ಜಂಬರಗಟ್ಟಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತೆಯನ್ನು ಕೊಲೆಗೈದಿರುವುದು

ಶ್ರೀ ಕೆ. ಎಚ್. ಶ್ರೀನಿವಾಸ.— ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಚಂಬರಗಟ್ಟಿ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತೆಯನ್ನು ಕೊಲೆಗೈದಿರುವ ಬಗ್ಗೆ ಗೃಹ ಮಂತ್ರಿಗಳವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—

೧. ದಿನಾಂಕ ೧೮-೧-೧೯೮೭ ರಂದರೆ ಮಂಡಲ್ ಪಂಚಾಯತ್ ಚುನಾವಣೆಗೆ ೨ ದಿವಸ ಮೊದಲು ಜಂಬರಘಟ್ಟ ಹಳ್ಳಿಯ ಶ್ರೀ ಸೈಯದ್ ಇಮಾಮ್‌ರವರ ಪತ್ನಿ ಶ್ರೀಮತಿ ನೂರ್ ಜಹಾನ್‌ರವರು ಮನೆಯಿಂದ ಕಾಣೆಯಾಗಿದ್ದಾರೆಂದು ಹಳೆ ಹೊನ್ನೂರಿನಿಂದ ಬಂದ ಒಬ್ಬಾತ ತಿಳಿಸಿದರು. ಆಂದು ಆಲ್ಲೇ ಇದ್ದ ಪಿ.ಎಸ್.ಐ. ಆದ ಶ್ರೀ ತಾಕಪ್ಪನವರು ಆಲ್ಲಿನ ನಿವಾಸಿಗಳ ಸಹಾಯದಿಂದ ಹುಡುಕಿದರು ಸಿಗಲಿಲ್ಲ. ಪುತ್ತಮಂತ್ರಲ ಹಳ್ಳಿಗಳಲ್ಲಿ ಈ ಬಗ್ಗೆ ದೂರು ಸ್ವೀಕರಿಸಲಾಗಿದ್ದರಿಂದ ಅಲ್ಲಿನ ಪೋಲೀಸರಿಗೆ ತಿಳಿಯಾಗಿದ್ದ ಹೆಂಗಸನ್ನು ಹುಡುಕಲು ಸೂಚನೆಯನ್ನು ಕೊಟ್ಟು ಹೋದರು.

೨. ದಿನಾಂಕ ೧೯-೧-೧೯೮೭ ರಂದು ಬೆಳಿಗ್ಗೆ ೯-೩೦ರ ಸಮಯದಲ್ಲಿ ಶ್ರೀ ಕರಿಯಣ್ಣನವರು ಮುಸ್ಲಿಂ ಮಹಿಳೆ ಕೊಲೆಯಾಗಿರುವುದಾಗಿ ಶಿವಮೊಗ್ಗ ಎಸ್. ಪಿ. ಯವರಿಗೆ ದೂರವಾಣಿ ಮೂಲಕ ತಿಳಿಸಿದರು. ಅವರು ಡಿ ವೈ.ಎಸ್.ಪಿ.ಗೆ ದೂರನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳಲು ಆದೇಶಿಸಿದರು. ನಂತರ ಅಲ್ಪಸಂಖ್ಯಾತರಿಗೆ ಹಾಗೂ ಪರಿಶಿಷ್ಟ ಜಾತಿ ಪಂತ್ತು ಪರಿಶಿಷ್ಟ ಪಂಗಡದವರಿಗೆ ಕಿರುಕುಳ ಕೊಡುತ್ತಿರುವುದಾಗಿರುವುದಾಗಿಯೂ ಮತ್ತು ಮುಸ್ಲಿಂ ಮಹಿಳೆಯು ಕೊಲೆಯಾಗಿರುವುದಾಗಿಯೂ ಶ್ರೀ ಲೋಕೇಶಪ್ಪನವರು ಎಸ್. ಪಿ. ರವರಿಗೆ ದೂರವಾಣಿ ಮುಖಾಂತರ ದೂರನ್ನು ಕೊಟ್ಟರು.

೩. ಮೃತರ ಪತಿ ಶ್ರೀ ಸೈಯದ್ ಇಮಾಮ್‌ರವರು ೧೧-೩೦ ಗಂಟೆಯಲ್ಲಿ ಕೊಟ್ಟ ದೂರನ್ನು ಅಪರಾಧ ಸಂಖ್ಯೆ ೧೭/೮೭ರಲ್ಲಿ ಐಪಿಸಿಯ ಕಲಂ ೩೦೨, ೫೦೪, ೧೧೪ ದಾಖಲು ಮಾಡಿಕೊಂಡು ಪಿಆರ್. ಪಿ. ಸಿ. ೧೫ ಕಲಂ ೧೭೪ ರಂತೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಯಿತು. ನೂರ್ ಜಹಾನ್‌ರ ದೇಹವು ಬರಿಗಾಣ ಪರದಲ್ಲಿ ನೇತಾಡುತ್ತಿತ್ತು. ಮರಣೋತ್ತರ ವೈದ್ಯಕೀಯ ಪರೀಕ್ಷೆಯ ವರದಿಯಂತೆ ಇವರ ಸಾವು ನೇಣು ಹಾಕಿಕೊಂಡು ಸತ್ತಿರುವುದಾಗಿ ತಿಳಿಯುತ್ತದೆ.

೪. ಈ ವಿಷಯದಲ್ಲಿ ಕೊಟ್ಟ ದೂರಿನಲ್ಲಿ ಕಳಕಂಡ ೧೦ ಜನ ಆಪಾದಿತರ ಹೆಸರನ್ನು ತಿಳಿಸಲಾಗಿದೆ (೧) ದೇವೆಂದ್ರಪ್ಪ ಬಿನ್ ಧರ್ಮಪ್ಪ ೨) ರಾಜಪ್ಪ ಬಿನ್ ಧರ್ಮಪ್ಪ (೩) ಹನುಮಂತಪ್ಪ ಬಿನ್ ಕೆಂಚಪ್ಪ (೪) ರಾಮಪ್ಪ ಬಿನ್ ಕೆಂಚಪ್ಪ (೫) ಕೃಷ್ಣಪ್ಪ ಉರುಫ್ ಕಿಟ್ಟಪ್ಪ ಬಿನ್ ಕೆಂಚಪ್ಪ (೬) ಗಂಗಪ್ಪ ಹನುಮಂತಪ್ಪ ಬಿನ್ ರಾಮಪ್ಪ (೭) ರುದ್ರಪ್ಪ ಬಿನ್ ಬಸಪ್ಪ (೮) ಹನುಮಂತಪ್ಪ ಬಿನ್ ಬಸಪ್ಪ (೯) ಸುಬ್ಬಣ್ಣ ಮತ್ತು (೧೦) ಈಶಪ್ಪ.

೧೨-೩೦ ಪಿ.ಎಂ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಕೊಲೆ ಆಗಿರತಕ್ಕದ್ದು ೧೮-೧-೧೯೮೭ ರಂದು. ಅವರು ಮರಕ್ಕೆ ನೇಣು ಹಾಕಿ ಸತ್ತಿದ್ದಾರೆಂದು ಹೇಳಿರತಕ್ಕದ್ದು ಸತ್ಯಕ್ಕೆ ಅತಿ ದೂರ ಇರತಕ್ಕ ವಿಚಾರ. ಈ ಬಗ್ಗೆ ನನ್ನ ಹತ್ತಿರ ಸಾಕಷ್ಟು ವಿವರಗಳು ಇವೆ. ಅಲ್ಲಿನ ಸಣ್ಣ ಕೊಂಬೆಗೆ ನೇಣು ಹಾಕಿದ್ದು ಕಾಲು ನೆಲದ ಮೇಲೆಯೇ ಇತ್ತು. ಆ ಒಂದು ಸ್ಥಿತಿಯಲ್ಲಿ ಅವರು ಸಾಯುವುದಕ್ಕೆ ಸಾಧ್ಯವೇ ಇಲ್ಲ. ಮತ್ತು ಆಕೆಯ ಮೈ ಮೇಲೆ ೧೨ ಕಚ್ಚಿದ ಗಾಯಗಳು ಇವೆ. ಹಾಗೂ ಆಕೆಯ ಮರ್ಮಾಂಗದ ಮೇಲೆ

ಕಲ್ಲಿನಿಂದ ಜಜ್ಜಿದ್ದಾರೆ. ಮತ್ತೆ ಅಲ್ಲಿ ಫೋಟೊ ತೆಗೆದುಕೊಳ್ಳಲು ಹೋದವರ ಕ್ಯಾಮರಾವನ್ನು ಪೋಲೀಸಿನವರು ಕಸಿದುಕೊಂಡಿದ್ದಾರೆ. ಮತ್ತೆ ಅಲ್ಲಿನ ಸಾವಿರಾರು ಜನ ಎಸ್.ಪಿ.ಯವರ ಹತ್ತಿರ ಮೆರವಣಿಗೆ ಬಂದು ಕಂಪ್ಲೇಂಟ್ ಮಾಡಿದರೂ ಇಂತಹವು ಎಷ್ಟೋ ಆಗುತ್ತವೆ, ಹೋಗುತ್ತವೆ ಎನ್ನುವ ಉತ್ತರ ಬೇರೆ ಏನೂ ಸಿಕ್ಕಿಲ್ಲ. ಅಲ್ಲಿರತಕ್ಕ ಪೋಲೀಸ್ ಇನ್ಸ್‌ಪೆಕ್ಟರ್ ತಾತಪ್ಪ ಈ ಕೇಸ್‌ನಲ್ಲಿ ಇಂಟರೆಸ್ಟೆಡ್ ಪಾರ್ಟಿಯಾದ್ದರಿಂದ ಆತನಿಂದ ನ್ಯಾಯ ದೊರಕುವುದಿಲ್ಲವಾದ್ದರಿಂದ ಬೇರೆಯವರಿಂದ ತನಿಖೆ ಮಾಡಿಸಿ, ಡಿ.ವೈ.ಎಸ್.ಪಿ.ಗಳಿಂದ ತನಿಖೆ ಮಾಡಿಸಿ ಎಂದು ಹೇಳಿದರೂ ಇದುವರೆಗೆ ಎಸ್.ಪಿ.ಯವರು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇಂತಿಂತಹವರು ಅಪರಾಧಿಗಳು ಎಂದರೆ ಆ ಕಲಸ ಅವರು ಮಾಡಿರಬಹುದು ಅಥವಾ ಬಿಟ್ಟಿರಬಹುದು. ಅವರನ್ನು ಬಂಧಿಸಿ ಸ್ವಲ್ಪ ವಿಚಾರಣೆ ಮಾಡಬೇಕಾದುದು ಪೋಲೀಸಿನವರ ಕರ್ತವ್ಯ. ಕೇವಲ ಒಬ್ಬರನ್ನು ಮಾತ್ರ ಪೋಲೀಸರು ಕರೆದುಕೊಂಡು ಹೋಗಿ ಬಿಟ್ಟು ಬಿಟ್ಟಿದ್ದಾರೆ. ಬೇರೆ ಯಾರನ್ನೂ ಮುಟ್ಟಿಲ್ಲ. ಪೋಸ್ಟ್ ಮಾರ್ಟಮ್ ರಿಪೋರ್ಟ್‌ನಲ್ಲಿ ಈ ರೀತಿ ಇದೆ ಎಂದು ತಾವು ಹೇಳುತ್ತಿದ್ದೀರಿ. ಇಷ್ಟು ಮಾತ್ರ ರಿಪೋರ್ಟ್‌ನಲ್ಲಿ ಇದ್ದರೆ ಎಷ್ಟರಮಟ್ಟಿಗೆ ಸರಿಯಾದ ವರದಿಯನ್ನು ಅವರು ನಿಮಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಮಂನಸ್ಪೇಚ್ಛೆ ಅವರು ಕೊಟ್ಟ ವರದಿಯನ್ನು ನೀವು ನಮಗೆ ಕೊಡುತ್ತಿದ್ದೀರಿ. ಮತ್ತೆ ಕೊನೆಯಲ್ಲಿ ಸಿ.ಒ.ಡಿ.ಗೆ ಇದನ್ನು ವಹಿಸಲಾಗಿದೆ ಎಂದು ಹೇಳುತ್ತಿದ್ದೀರಿ. ಯಾವ ತಾರೀಖಿಗೆ ಅವರಿಗೆ ಇದನ್ನು ವಹಿಸಿದ್ದೀರಿ ? ಲೋಕಲ್ ಪೋಲೀಸಿನವರು ಇಷ್ಟು ದಿವಸ ನಿದ್ದೆ ಮಾಡುತ್ತಿದ್ದರೇ ? ಅವರದ್ದು ಈ ಬಗ್ಗೆ ಏನು ವರದಿ ಇದೇ ? ಮೂರೂ ತಿಂಗಳಾದ ನಂತರ ಇವೊತ್ತು ಸಿ.ಓ.ಡಿ.ಗೆ ವಹಿಸಲಾಗಿದೆ ಎಂದರೆ ಬಹುಶಃ ಕೊಲೆಯ ವಾಕ್ಯವನ್ನು ನೀವೇ ಸೇರಿಸಿರಬಹುದೆಂದು ಕಾಣುತ್ತದೆ. ಪೂರ್ತಿ ವರದಿ ಬಂದಮೇಲೆ ಕೊಲೆಯಲ್ಲಿ ಸಿ.ಒ.ಡಿ.ಗೆ ವಹಿಸುವ ತೀರ್ಮಾನ ನಿಮ್ಮಿಂದ ಆಗಿದೆ. ಈಗ ಸಿ.ಒ.ಡಿ.ನವರು ಹೋಗಿ ಎಲ್ಲಿ ಹೆಣವನ್ನು ಹುಡುಕಬೇಕು ? ಅವರಿಗೆ ಮಾಹಿತಿಯನ್ನು ಕೊಡುವವರು ಯಾರು ? ಫೋಟೋ ತೆಗೆಯಲು ಅಲ್ಲಿ ಬಿಟ್ಟಿರುವುದಿಲ್ಲ. ಇನ್ನು ಉಳಿದಿದ್ದು, ಡಾಕ್ಟರನ್ನು ಬುಕ್ ಮಾಡಿದರೆ ಕೇಸ್ ಮುಂಗಿದೇ ಹೋಗುತ್ತದೆ. ಇಂತಹ ಭೀಕರ ಕೊಲೆಯ ವಿಷಯದಲ್ಲಿ ಇಲಾಖೆಯವರು ನಿದ್ದೆ ಮಾಡುತ್ತಿದ್ದರೇ ? ಸಮಾಜದಲ್ಲಿ ಕೊಲೆಗಳು ಆಗುತ್ತವೆ. ಎಲ್ಲಾ ಕೊಲೆಗಳ ಬಗ್ಗೆ ದೊಡ್ಡದು ಮಾಡಿ ಹೇಳುವ ಚಟ ನನಗಿಲ್ಲ. ಇದು ಒಂದು ಅಮಾನುಷ ಕೊಲೆ. ಪೋಲೀಸ್ ಇಲಾಖೆ ನಿದ್ದೆ ಮಾಡುತ್ತಿದೆಯೇ ? ಅಡಳಿತ ವ್ಯವಸ್ಥೆ ತುಂಬಾ ಕೆಟ್ಟುಹೋಗಿದೆ ಎನ್ನುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಸಾಕ್ಷಿ ಬೇಕಾಗಿಲ್ಲ. ಇಂತಹ ಕೊಲೆಯ ಬಗ್ಗೆ ಅಧಿಕಾರಿಗಳು ಅದರಲ್ಲೂ ಜಿಲ್ಲಾ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಇನ್ನೂ ಲಕ್ಷ್ಯ ಕೊಟ್ಟಿಲ್ಲ ಎಂದರೆ ಹೇಗೆ ? ಒಂದೊಂದೂ ಕಾನ್‌ವರ್‌ಸೇಷನ್‌ನನ್ನೂ ಇವತ್ತು ಟೈಪ್ ಮಾಡಿ ತರಿಸಿದ್ದೇನೆ. ಎಸ್ ಪಿ.ಯವರ ಹತ್ತಿರ ಹೇಳಿದರೆ ಇಂತಹದ್ದು ಎಷ್ಟೋ ಆಗುತ್ತವೆ ಎಂದು ಹೇಳುತ್ತಾರೆ. ಆದುದಗಿಂದ ಇದರ ಬಗ್ಗೆ ಅವರು ಅಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂದು ನನಗನ್ನಿಸುವುದಿಲ್ಲ. ಸಂಪೂರ್ಣ ತನಿಖೆ ಮಾಡಿ ವರದಿಯನ್ನು ಕೊಡಲು ಸಿ.ಓ.ಡಿ.ಗೆ ವಹಿಸಲಾಗಿದೆ ಎಂದಿದ್ದಾರೆ. ಸಿ.ಒ.ಡಿ. ಎಂದರೆ ಸಮುದ್ರಕ್ಕೆ ಸೇರಿದಹಾಗೆ.

ಅಧ್ಯಕ್ಷರು.—ಮತ್ತೆ ಯಾವ ಓ.ಡಿ.ಗೆ ಹಾಕಬೇಕು ?

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅವರಲ್ಲಿ ಓ.ಡಿ. ಇಲ್ಲ, ಸಿ.ಓ.ಡಿ. ಒಂದೇ ಇರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಈಗ ಏನಾಗಿದೆ ಎನ್ನುವುದು ನಮಗೆ ಬೇಕು. ಈಗ ನಾನು ಹೇಳುವುದು ಇಷ್ಟೇ. ಸಂಪೂರ್ಣ ಸತ್ಯಕ್ಕೆ ದೂರವಾಗಿರತಕ್ಕ ಒಂದು ವರದಿಯನ್ನು ತಾವು ಸಭೆಗೆ ಒಪ್ಪಿಸಿದ್ದೀರಿ. ಈ ಬಗ್ಗೆ ವರದಿ ತರಿಸಲು ಸಿ.ಒ.ಡಿಗೆ ಯಾವಾಗ ಒಪ್ಪಿಸಿದ್ದೀರಿ ? ತಾವು ಇದನ್ನು ನಿಗೂಢ ಸಾವು ಎಂದು ಬೇರೆ ಹೇಳುತ್ತೀರಿ.

ಅಧ್ಯಕ್ಷರು.—ನಿಮಗೆ ಏನು ಆಗಬೇಕೆಂದು ತಾವು ನೇರವಾಗಿ ಹೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕೊಲೆಯಾಗಿ ಇಷ್ಟು ದಿವಸಗಳಾದರೂ ಸ್ಥಳೀಯ ಪೋಲೀಸರು ಸರಿಯಾದ ರೀತಿಯಲ್ಲಿ ಏಕೆ ಕ್ರಮವನ್ನು ಕೈಗೊಳ್ಳಲು ಕಾರ್ಯಕ್ರಮ ಹಾಕಿಕೊಳ್ಳಲಿಲ್ಲವೆಂಬ ಬಗ್ಗೆ ಸರಿಯಾದ ತನಿಖೆ ಆಗಬೇಕು. ಮತ್ತು ಕೊಲೆಗೆ ಕಾರಣ ಕರ್ತರಾದವರಿಗೆ ಸರಿಯಾದ ಶಿಕ್ಷೆಯನ್ನು ಮಾಡಬೇಕು. ಊರಿನಲ್ಲಿರುವ ಸಾವಿರಾರು ಜನರು ಇದು ಆತ್ಮಹತ್ಯೆ ಅಲ್ಲವೆಂದು ಹೇಳುತ್ತಿದ್ದಾರೆ. ಒಬ್ಬರು ಕೂಡಾ ಇದು ಆತ್ಮಹತ್ಯೆ ಎಂದು ಹೇಳುತ್ತಾ ಇಲ್ಲ. ಈ ಕೊಲೆಗೆ ಸಹಕರಿಸಿದವರೆಲ್ಲರೂ

ಬೆಂಗಳೂರಿನಲ್ಲಿ ಆಶ್ರಯ ಪಡೆಯುತ್ತಿದ್ದಾರೆಂದು ಹೇಳಿ ಬೇಕಾದಷ್ಟು ಕಾಗದಗಳು ಬಂದಿವೆ. ಇವತ್ತು ಯಾರ ಮೇಲೆ ಸಂಶಯ ಇದೆ ಎಂದು ಹೇಳಲಾಗಿದೆ ಅವರನ್ನು ಪೋಲೀಸ್ ಠಾಣೆಗೆ ಕರೆಸಿರುವುದಿಲ್ಲ. ಇವರನ್ನೆಲ್ಲಾ ಸಂಪೂರ್ಣವಾಗಿ ರಾಜಕೀಯವಾಗಿ ರಕ್ಷಣೆ ಮಾಡಿ ಬಿಟ್ಟಿದ್ದಾರೆನ್ನುವ ಆರೋಪ ಇದೆ. ಈ ಒಂದು ಆರೋಪ ನಿಜವಿರಬಹುದು ಅಥವಾ ಸುಳ್ಳೇ ಇರಬಹುದು. ಈ ಸಂದರ್ಭದಲ್ಲಿ ನಾನು ಯಾವುದೇ ಸತ್ಯಾಸತ್ಯತೆಯ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ಆರೋಪ ಬಹಳ ಗಂಭೀರವಾಗಿರುವುದರಿಂದ ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಗಂಭೀರವಾಗಿ ಪರಿಗಣಿಸಿ ಸರಿಯಾದ ರೀತಿಯಿಂದ ತನಿಖೆ ಮಾಡುವುದು ಅತ್ಯಗತ್ಯವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳು ಕೊಟ್ಟಂತಹ ಹೇಳಿಕೆಯನ್ನು ಓದಂತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಬಹುಶಃ ಅಧಿಕಾರಿಗಳು ಕೊಟ್ಟಂತಹ ಹೇಳಿಕೆಯನ್ನು ಓದಿದ ಮೇಲೆ ವಿಷಯ ಬಹಳ ಗಂಭೀರವಾಗಿದೆಯೆಂದು ತಿಳಿದುಕೊಂಡು ಸಿ ಒ.ಡಿ. ತನಿಖೆ ಮಾಡಲು ಆರ್ಡರ್ ಮಾಡಿದ್ದೇನೆ, ಇದಕ್ಕಿಂಥ ಉತ್ತಮವಾದ ತನಿಖೆಯನ್ನು ಯಾರಿಂದ ಮಾಡಿಸಬೇಕೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅಲ್ಲಿರತಕ್ಕ ರೆಗ್ಯುಲರ್ ಪೋಲೀಸರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿಲ್ಲವೆಂದು ಕಂಡಿದ್ದರಿಂದ ನಾನು ತನಿಖೆಗೆ ಆರ್ಡರ್ ಮಾಡಿದ್ದೇನೆ. ಕಾಲಿಂಗ್ ಅಟೆನ್‌ಷನ್‌ಗೆ ಉತ್ತರವನ್ನು ತರಿಸಿಕೊಂಡ ಮೇಲೆ ಇದನ್ನು ಸಿ.ಒ.ಡಿ.ಗೆ ರೆಫರ್ ಮಾಡುವುದು ಸರಿಯೆಂದು ಮಾಡಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಸ್ಥಳೀಯ ಪೊಲೀಸರಿಂದ ಬಂದಿರುವ ವರದಿ ಸಾಲದೆಂದು ತಿಳಿದುಕೊಂಡು ತಾವು ಸಿ.ಒ.ಡಿ. ತನಿಖೆಗೆ ಆರ್ಡರ್ ಮಾಡಿದ್ದೀರಿ. ಆದರೆ ಈ ಕೊಲೆಯನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿದ್ದಾರೆ. ತನಿಖೆ ಮಾಡಲಿಕ್ಕೆ ವಿಫಲರಾಗಿರತಕ್ಕ ಸ್ಥಳೀಯ ಪೊಲೀಸರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅವರು ಸಿ.ಒ.ಡಿ. ತನಿಖೆಯ ದಾರಿಯನ್ನು ತಪ್ಪಿಸುತ್ತಾರೆ.

ಶ್ರೀ ಬಿ ರಾಚಯ್ಯ.—ಸಿ.ಒ.ಡಿ. ಯವರು ಯಾವ ಅಧಿಕಾರಿ ತಪ್ಪಿತಸ್ಥನೆಂದೂ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾರೋ ಅವರು ಹೇಳಿದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಮರ್ಡರ್ ಆಗಿದೆ. ಆದನ್ನು ಪತ್ತೆ ಹಚ್ಚಿಲ್ಲ, ಅಂತಹವರನ್ನು ಅಲ್ಲೆ ಇಟ್ಟು ಎನ್‌ಕ್ವಾಯರಿ ಹೇಗೆ ಮಾಡಿಸುತ್ತೀರಿ? ಅವರ ಕೈಯೊಳಗಿನ ಅಧಿಕಾರವನ್ನು ಬೇರೆಯವರ ಕೈಗೆ ಕೊಟ್ಟು ಆಮೇಲೆ ಸಿ ಒ.ಡಿ. ತನಿಖೆ ಮಾಡಿಸಿ?

ಶ್ರೀ ಬಿ. ರಾಚಯ್ಯ.—ಸಿ.ಒ.ಡಿ. ಅಧಿಕಾರಿಗಳಿಗೆ ಅಲ್ಲಿರುವಂತಹ ವಾಸ್ತವಾಂಶ ಅವರಿಗೆ ಗೊತ್ತಿದೆ. ಅವರು ಏನು ಮಾಡಬೇಕೆಂದು ತಿಳಿಸುತ್ತಾರೆ ಆ ರೀತಿ ಮಾಡುತ್ತೇನೆ. ಕಂಪ್ಲೆಂಟ್ ಮಾಡುತ್ತಾರೆ, ಆದ್ದರಿಂದ ಅವರನ್ನು ಅಲ್ಲಿ ಇಡುವುದಿಲ್ಲ. ಇಡುವುದು ಸರಿಯಲ್ಲವೆಂದರೆ I am not sitting over here to liquidate the police force.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಗಮನಿಸಬೇಕು, ಒಂದು ಮರ್ಡರ್ ಆದಮೇಲೆ ಲೋಕಲ್ ಪೊಲೀಸರಿಗೆ ಅಧಿಕಾರವಿದೆ ಪತ್ತೆಹಚ್ಚಬೇಕು. ಕಾನೂನು ಪ್ರಕಾರ ಆದನ್ನು ತಾವು ಒಪ್ಪುತ್ತೀರಿ. ಸ್ಥಳೀಯ ಪೊಲೀಸರು ಕರ್ತವ್ಯಲೋಪ ಮಾಡಿದ್ದಾರೆಂದು ತೀರ್ಮಾನ ಮಾಡಿ ಸಿ.ಒ.ಡಿ. ತನಿಖೆಗೆ ಒಪ್ಪಿಸುವುದಕ್ಕೆ ತೀರ್ಮಾನ ಮಾಡಿದ್ದೇನೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಕರ್ತವ್ಯ ಲೋಪವಾಗಿದೆ ಎಂದು ತಾವೇ ಒಪ್ಪಿಕೊಂಡ ಮೇಲೆ ಅವರುಗಳ ಮೇಲೆ ವಿಚಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೆ? ಹಾಗೆ ಒಪ್ಪುವುದಾದರೆ, ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ರಾಚಯ್ಯ.—ನನಗೆ ಬಂದಂತಹ ವರದಿಯ ಬಗ್ಗೆ ಆನುಮಾನ ಬಂದು ಸರಿಯಾಗಿ ತೃಪ್ತಿಯಾಗದ್ದರಿಂದ ಏನೋ ಮುಚ್ಚಿಟ್ಟಿದ್ದಾರೆಂದು ತಿಳಿದು ಸಿ.ಒ.ಡಿಗೆ ರೆಫರ್ ಮಾಡಿದ್ದೇನೆ. ಹಿಂದೆ ಸಿ.ಒ.ಡಿಗೆ ರೆಫರ್ ಮಾಡಿದಂತಹ ಕೇಸುಗಳಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಯಾವುದೋ ಒಂದು ಹೆಣವನ್ನು ಮಧ್ಯಗಿರಿ ಕರ್ಜಿನಲ್ಲಿ ಮುಚ್ಚಿಟ್ಟಿದ್ದರು ಎಂದು ಗೊತ್ತಾಗಿ, ಸಿ.ಒ.ಡಿ. ಯವರು ಹೇಳಿದ್ದರಿಂದ ಅವರ ಮೇಲೆ ಕ್ರಿಮಿನಲ್ ಪ್ರೊಸಿಜರ್ ಪ್ರಕಾರ ಕ್ರಮ ತೆಗೆದುಕೊಂಡಿದ್ದೇನೆ. ಈ ತರಹ ಮೂರು ನಾಲ್ಕು ಕೇಸುಗಳಲ್ಲಿ ಕ್ರಮ ತೆಗೆದುಕೊಂಡಿದ್ದೇನೆ. ಪ್ರತಿಯೊಂದು ಕೇಸಿಗೂ ಬೇರೆಯವರನ್ನು ಇಟ್ಟು ಎನ್‌ಕ್ವಾಯರಿಗೆ ಅವಕಾಶ ಮಾಡಿಕೊಡಿಯೆಂದು ಹೇಳಿದರೆ ನಾನು ಮಾಡಬಲ್ಲೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಸ್ಥಳೀಯ ಪೋಲೀಸರನ್ನು ವರ್ಗಾವಣೆ ಮಾಡಿ ಬೇರೆ ಅಧಿಕಾರಿಗಳನ್ನು ಹಾಕಿ ಆಮೇಲೆ ತನಿಖೆ ಮಾಡಿಸಿ.

ಶ್ರೀ ಬಿ. ರಾಚಯ್ಯ.—ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು.—ಮಾಡುತ್ತೇನೆಂದು ಹೇಳಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಅವರ ಬಾಯಿಂದ ಬರಬೇಕು.

ಶ್ರೀ ಬಿ. ರಾಚಯ್ಯ.—ಇಂಪಾರ್ಷಿಯಲ್ ಎನ್‌ಕ್ವಾಯರಿ ಆಗಬೇಕಾದರೆ ಅದನ್ನು ನಾನು ಮಾಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್,—ಅವರನ್ನು ಸಸ್ಪೆಂಡ್ ಮಾಡದಿದ್ದರೂ ಪರವಾಗಿಲ್ಲ, ಅವರನ್ನು ಬೇರೆ ಕಡೆ ಹಾಕಿ ನಿಷ್ಪಕ್ಷಪಾತವಾದ ತನಿಖೆಗೆ ಅವಕಾಶ ಮಾಡಿ.

ಶ್ರೀ ಬಿ. ರಾಚಯ್ಯ.—ಸಿ.ಓ.ಡಿ. ಅಧಿಕಾರಿಗಳು ಅಲ್ಲಿಗೆ ಹೋಗುತ್ತಾರೆ. ಅವರು ಅಲ್ಲಿರುವುದರಿಂದ ನವಂಗೆ ಕಷ್ಟವಾಗುತ್ತದೆಂದು ಹೇಳುತ್ತಾರೆ. ಅವರು ಹೇಳುವುದನ್ನು ತಿಳಿದುಕೊಂಡು ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ನೋಡಿ, ನಾನು ಅದನ್ನು ತಿಳಿದುಕೊಂಡು ಏನು ಮಾಡಬೇಕೋ ಅದನ್ನು ಮಾಡ್ತೇನೆ ಎಂದರೆ ಅರ್ಥ ಏನು? ನೀವು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಏನು ಮಾಡುತ್ತೇನೆ ಎಂದು ಅವರು ಹೇಳಬೇಕು. ಅವರು ಕೇಳುವುದು ಇಷ್ಟೇ, ಇಂಪಾರ್ಷಿಯಲ್ ಎನ್‌ಕ್ವೈರಿ ಆಗಬೇಕಾದರೆ...

ಅಧ್ಯಕ್ಷರು.—ಅವರು ಗಮನ ಸೆಳೆಯುವ ಸೂಚನೆಯನ್ನು ತಂದಿದ್ದಾರೆ. ಎಲ್ಲರೂ ಎದ್ದು ನಿಂತರೆ ಹೇಗೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಇರತಕ್ಕಂಥ ಅಧಿಕಾರಿಗಳು ಅಲ್ಲಿ ಇದ್ದರೆ ಎನ್‌ಕ್ವೈರಿ ಮಾಡಲಿಕ್ಕೆ ತೊಂದರೆಯಾಗುತ್ತದೆ. ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡಿ ಬೇರೆಯವರನ್ನು ಅಲ್ಲಿಗೆ ಹಾಕಿ ಎಂದು ಅವರು ಹೇಳುತ್ತಿರುವುದು. ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ ಎಂದು ಹೇಳಿದರೆ ಹೇಗೆ?

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ...

ಅಧ್ಯಕ್ಷರು.—ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ನೀವು ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆಯಲ್ಲಿ ಹಾಗೆ ಎಲ್ಲರೂ ಎದ್ದುನಿಂತು ಮಾತನಾಡುವುದಕ್ಕೆ ಬರುವುದಿಲ್ಲ. ನಿಮಗೆ ಅವಕಾಶ ಕೊಟ್ಟ ಕೂಡಲೇ ಹೀಗೆ ಮಾಡುತ್ತೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಏನು ಹೇಳಿದರು ಎಂದರೆ, ಟ್ರಾನ್ಸ್‌ಫರ್ ಮಾಡುತ್ತೇನೆ ಎಂದು ಮೊದಲು ಹೇಳಿದರು. ಎರಡನೇ ಸಲ ಸ್ವಲ್ಪ ಅನುಮಾನ ಬರುವ ರೀತಿಯಲ್ಲಿ ಹೇಳಿದರು. ಸ್ಪಷ್ಟವಾಗಿ ಅನುಮಾನ ಬಾರದ ಹಾಗೆ ಹೇಳಿಬಿಡಿ.

ಶ್ರೀ ಬಿ. ರಾಚಯ್ಯ.—ಶಾಸನ ಸಭೆಯಲ್ಲಿ ವರ್ಗಾವರ್ಗಿ, ಸಸ್ಪೆಂಡ್ ಮಾಡುವುದಕ್ಕೆ ಬದಲಿಗೆ ನಾನು ಹೇಳಿದೆ ಸಿ. ಓ. ಡಿ. ಅಧಿಕಾರಿಯನ್ನು ಕಳಿಸಿದ್ದೇನೆ ಎಂದು. ಅವರು ಅಲ್ಲೇ ಇರುವುದರಿಂದ ಇಂಪಾರ್ಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ, ಸಸ್ಪೆಂಡ್ ಮಾಡಿ ಎಂದು ಹೇಳಿದರೆ ಮಾಡುತ್ತೇನೆ, ಬೇರೆ ಕಡೆಗೂ ವರ್ಗ ಮಾಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಹೇಳುವುದಲ್ಲ. ಸಾವಿರಾರು ಜನ ಅಲ್ಲಿ ಹೆದರುತ್ತಿದ್ದಾರೆ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಿಮ್ಮ ಕಾಲದಲ್ಲಿ ಹೆಣ್ಣು ಮಕ್ಕಳ ಜೀವಕ್ಕೆ ಬೆಲೆಯೇ ಇಲ್ಲದ ಹಾಗೆ ಆಯಿತು. ಆಕೆ ಸತ್ತೇ ಹೋಗಿದ್ದಾಳೆ. ಸಾವಿರಾರು ಜನ ಗಲಾಟೆ ಮಾಡುತ್ತಿದ್ದಾರೆ. ಆದರೂ ಕೂಡ ಆ ಅಧಿಕಾರಿಯನ್ನು ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಸಿ.ಓ.ಡಿ.ಯವರು ಮೇಲಿಂದ ಇಳಿದಿದ್ದಾರೆಯೇ ಅವರು ಕೂಡ ಅಂಥವರೇ ಇರುವುದು. ಬೆಳಿಗ್ಗೆ ಎದ್ದರೆ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ ನಿಮ್ಮ ಉತ್ತರಗಳನ್ನು ನೋಡುತ್ತಿದ್ದೇನೆ, ಪ್ರಶ್ನೆಗಳನ್ನು ನೋಡುತ್ತಿದ್ದೇನೆ ಏಕೆ ಹೀಗೆ ಅಧಿಕಾರವನ್ನು ನಡೆಸುತ್ತಿದ್ದೀರಿ? ಅವರನ್ನು ಭಯಪಡಿಸಲಿಕ್ಕೆ ನಿಮ್ಮಲ್ಲಿ ಸಾಧನ ಇಲ್ಲವೆ ? ಆರೋಪಿಯನ್ನು ಗುಂಡಿಕ್ಕಿ ಸಾಯಿಸುತ್ತೇವೆ ಎಂದು ತಿದ್ದುಪಡಿಯನ್ನಾದರೂ ತೆಗೆದುಕೊಂಡು ಬನ್ನಿ. ಆದು ಬಿಟ್ಟುಬಿಟ್ಟು ಆಕೆ ಸತ್ತೇ ಹೋಗಿದ್ದಾಳೆ, ನೇಣು ಹಾಕಿಕೊಂಡಿಲ್ಲ ಎಂದು ಸಾವಿರಾರು ಜನ ಹೇಳುತ್ತಿದ್ದಾರೆ. ಹೀಗಿರುವಾಗ ಸಿ.ಓ.ಡಿ. ವರದಿ ಬಂದಮೇಲೆ ಮಾಡುತ್ತೇವೆ, ಎಂದು ಹೇಳುತ್ತೀರೇ ಹೊರತು ಸರಿಯಾದಂಥ ರೀತಿಯಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಮಾಡುತ್ತೇವೆ. ಆತನನ್ನು ವರ್ಗಾವಣೆ ಮಾಡುತ್ತೇವೆ. ಎಂದು ಸ್ಪಷ್ಟವಾಗಿ ಹೇಳಿ.

ಅಧ್ಯಕ್ಷರು.—ಡೆಫನೈಟ್ ಆಗಿ ಹೇಳಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಸಿ.ಓ.ಡಿ. ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದರೆ ಆದು ಡೆಫನೈಟ್ ಉತ್ತರ ಅಲ್ಲವೇ ಸ್ವಾಮಿ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಹೀಗೆ ಎದ್ದು ನಿಂತು ಮಾತನಾಡಿದರೆ ಹೇಗೆ ?

ಶ್ರೀ ಬಿ. ರಾಚಯ್ಯ.—ಅನ್ಯಾಯವಾಗಿದೆ ಎಂದು ಹೇಳಿದಕ್ಕೋಸ್ಕರವೇ ಇವತ್ತು ಸಿ. ಓ. ಡಿ. ತನಿಖೆಗೆ ಒಪ್ಪಿಸಿರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಥೋ, ಭ್ರಷ್ಟ. ತಥೋ ಭ್ರಷ್ಟ ಎಂದು ಹೇಳಿದ ಹಾಗೆ ಆಯಿತು, ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿ.

ಶ್ರೀ ಬಿ. ರಾಚಯ್ಯ.—ಮಾಡೋಣ ಮಾಡೋಣ.....

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಟ್ರಾನ್‌ಫರ್ ಮಾಡಂತ್ತೇನೆ ಎಂದು ಅವರು ಹೇಳಿದ್ದಾರೆ. ಬೇಕಾದರೆ ರೆಕಾರ್ಡ್ ತರಸಿ ನೋಡೋಣ.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ರೆಕಾರ್ಡ್ ತೆಗೆದುಕೊಂಡು ಏನು ಮಾಡಲಿ. ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿ ಇಂಪಾರ್ಶಿಯಲ್ ಎನ್‌ಕ್ವೈರಿ ಮಾಡುತ್ತೇನೆಂದು ಹೇಳಲಿ.

(ಗೊಂದಲ)

ಅಧ್ಯಕ್ಷರು.—ಈಗ ಮುಂದಿನ ಗವರ್ನರ ಸೆಳಿಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲಾ ಪೋಲೀಸ್ ವ್ಯವಹಾರ ಇದೇರೀತಿ ಆಗುತ್ತಿದೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಎಲ್ಲಾ ಪೋಲೀಸ್ ವ್ಯವಹಾರ ಇದೇರೀತಿ ಆಗುತ್ತಿಲ್ಲ. ನಾನು ಆದನ್ನೆಲ್ಲಾ ವಿವರಣೆ ಮಾಡಿ, ಎಲ್ಲೋ ತಪ್ಪಾಗಿರಬಹುದು, ಏನೋ ಆಗಿರಬಹುದು ಎಂದು ಸಿ.ಓ.ಡಿ.ಗೆ ಕಳುಹಿಸ ಬೇಕೆಂದು ಹೇಳಿದರೆ, ಎಲ್ಲವನ್ನೂ ಹೀಗೆಯೇ ಮಾಡುತ್ತೇವೆಂದು ಹೇಳಿದರೆ, ನನಗೆ ಅರ್ಥವಾಗುವುದಿಲ್ಲ. ಪ್ರಾಮಾಣಿಕವಾಗಿ ನಿಮಗೆ ಆ ಹೆಣ್ಣುಮಗಳ ಮೇಲೆ ಎಷ್ಟು ಗೌರವ ಇದೆಯೋ ಅದಕ್ಕಿಂತ ಜಾಸ್ತಿ ಗೌರವ ನನಗಿದೆ. ಅದಕ್ಕೋಸ್ಕರವೇ ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೆನು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಪಟಮಕ್ಕಿ ರತ್ನಾಕರ್ ಅವರೇ ಈಗ ತಾವು ಕೇಳಿದಿರಿ.